ಪ್ರಧಾನ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ  ಧಾರವಾಡ

**ಸಿಸಿ ನಂ. 154/2026**

ಫಿರ್ಯಾದುದಾರರು:    ಸಂಚಾರ ಪೋಲಿಸಠಾಣೆ , ಧಾರವಾಡ

**-ವಿರುದ್ಧ-**

ಆರೋಪಿತನ ಹೆಸರು:  1. ಶಿವಾನಂದ ಶಂಕರಪ್ಪ ಐಗೋಳ, ವಯಾ: 26 ವರ್ಷ
ಸಾ: ದಾಸನಕೊಪ್ಪ ತಾ:ಜಿ: ಧಾರವಾಡ.

**ಆ ಪಾ ದ ನೆ**

ದಿನಾಂಕ:15-12-2025 ರಂದು ಸಾಯಂಕಾಲ 5.00 ಗಂಟೆ ಸಮಾರಿಗೆ ಧಾರವಾಡ-ಯಾದವಾಡ ರಸ್ತೆಯಲ್ಲಿ ಧಾರವಾಡಕರ ಲಾನ್ ಹತ್ತಿರ 1 ನೇ ಆರೋಪಿಯಾದ ನೀವು ಚಲಾಯಿಸುತ್ತಿದ್ದ ಮಹೀಂದ್ರಾ ಕಂಪನಿ ಬೊಲೆರೋ ವಾಹನ ನಂ: ಕೆಎ-37/ಬಿ-4701 ನೇದ್ದನ್ನು ಧಾರವಾಡ ಕಡೆಯಿಂದ ಯಾದವಾಡ ಕಡೆಗೆ ಸಾರ್ವಜನಿಕ ರಸ್ತೆಯಲ್ಲಿ ಅತೀ ಜೋರಾಗಿ ಹಾಗೂ ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬರುವಾಗ ನಿಮ್ಮ ಮುಂದೆ ಹೊರಟ್ಟಿದ್ದ ಟಿ.ವಿ.ಎಸ್ ಕಂಪನಿ ಮೋಟರ ಸೈಕಲ್ ನಂ.ಕೆಎ-25/ಇವಿ-8451 ನೇದ್ದಕ್ಕೆ ಅಪಘಾತ ಪಡಿಸಿ ಬೀಳಿಸಿ ಆ ಮೂಲಕ **ಭಾರತೀಯ ನ್ಯಾಯ ಸಂಹಿತೆ ಕಲಂ 281** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು ಆರೋಪಿತರಾದ ನೀವು ಮಹೀಂದ್ರಾ ಕಂಪನಿ ಬೊಲೆರೋ ವಾಹನವನ್ನು ಚಲಾಯಿಸಿಕೊಂಡು ಬರುವಾಗ ನಿಮ್ಮ ಮುಂದೆ ಹೊರಟ್ಟಿದ್ದ ಮೋಟರ ಸೈಕಲ್ ಸವಾರ ಬಸವಣ್ಣೆಪ್ಪ ತಿಪ್ಪಣ್ಣ ಅನಾಡ ಇವರಿಗೆ ಬಲವಾದ ಗಾಯಪಡಿಸಿ ಮರಣ ಹೊಂದುವಂತೆ ಮಾಡಿ ಆ ಮೂಲಕ ನೀವು **ಭಾರತೀಯ ನ್ಯಾಯ ಸಂಹಿತೆ 106 (1)** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು ಆರೋಪಿತರಾದ ನೀವು ಮಹೀಂದ್ರಾ ಕಂಪನಿ ಬೊಲೆರೋ ವಾಹನವನ್ನು ಚಲಾಯಿಸಿಕೊಂಡು ಬರುವಾಗ ನಿಮ್ಮ ಮುಂದೆ ಹೊರಟ್ಟಿದ್ದ ಮೋಟರ ಸೈಕಲ್ ಸವಾರ ಬಸವಣ್ಣೆಪ್ಪ ತಿಪ್ಪಣ್ಣ ಅನಾಡ ಇವರಿಗೆ ಅಪಘಾತಪಡಿಸಿ, ಗಾಯಾಳುವಿಗೆ ಉಪಚಾರಕ್ಕೆ , ಆಸ್ಪತ್ರೆಗೆ ಸಾಗಿಸದೇ ಹಾಗೇ ಹೋಗಿ **ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ 134(ಎ) ಸಹಕಲಂ 187** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಮೇಲೆ ಹೇಳಿದ ಸ್ಥಳ, ದಿನಾಂಕ ಹಾಗೂ ಸಮಯದಂದು ಆರೋಪಿತರಾದ ನೀವು ಮಹೀಂದ್ರಾ ಕಂಪನಿ ಬೊಲೆರೋ ವಾಹನವನ್ನು ಚಲಾಯಿಸಿಕೊಂಡು ಬರುವಾಗ ನಿಮ್ಮ ಮುಂದೆ ಹೊರಟ್ಟಿದ್ದ ಮೊಟರ ಸೈಕಲ್ ಸವಾರ ಬಸವಣ್ಣೆಪ್ಪ ತಿಪ್ಪಣ್ಣ ಅನಾಡ ಇವರಿಗೆ ಅಪಘಾತಪಡಿಸಿ ಅಪಘಾತದ ಸಂಗತಿಯನ್ನು ಪೋಲಿಸ ಠಾಣೆಗೆ ತಿಳಿಸದೇ ಹಾಗೇ ಹೋಗಿ **ಭಾರತೀಯ ಮೋಟಾರು ವಾಹನಗಳ ಕಾಯ್ದೆ ಕಲಂ 134(ಬಿ) ಸಹಕಲಂ 187** ರ ಪ್ರಕಾರ ಅಪರಾಧವೆಸಗಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಇದೆ. ಇದಕ್ಕೆ ನೀವೇನು ಹೇಳುವಿರಿ ?

ಪ್ರಶ್ನೆ **1)** ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿ ತಿಳಿದುಕೊಂಡಿದ್ದೀರಾ?
ಉತ್ತರಃ

ಪ್ರಶ್ನೆ **2)** ಈಗ ನಿಮಗೆ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?
ಉತ್ತರಃ

ಧಾರವಾಡ
ದಿನಾಂಕಃ 19-06-2026 ಪ್ರ. ಮು. ನ್ಯಾ. ದಂ, ಧಾರವಾಡ